ಪಿ.ಡಬ್ಲೂ–೨
ದಿ: ೯.೧೧.೨೦೨೨ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಆರೋಪಿ ಪರ ಶ್ರೀ ಎನ್.ಎಂ ವಕೀಲರಿಂದ,

ಪಿರ್ಯಾದಿಯ ತಂದೆ ರಾಮಚಂದ್ರಪ್ಪ ಅವರ ಪರಿಚಯ ನನಗೆ ಮೊದಲಿನಿಂದಲೂ ಇದೆ. ನನ್ನ ಪ್ರಮಾಣ ಪತ್ರದಲ್ಲಿರುವ ಹೇಳಿಕೆಯನ್ನು ರಾಮಚಂದ್ರಪ್ಪರವರು ಹೇಳಿ ಬರೆಸಿದ್ದಾರೆ ಎಂದರೆ ಸರಿಯಲ್ಲ. ಪಿರ್ಯಾದಿಯ ವಕಾಲತ್ ನಲ್ಲಿ ರಾಮಚಂದ್ರಪ್ಪರವರ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪಿರ್ಯಾದಿ ಮತ್ತು ಅವರ ತಂದೆ ತುಂಬಾ ವರ್ಷಗಳಿಂದ ಪರಿಚಯ ಇದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ನಾವು ಬೇರೆ ಬೇರೆ ಮನೆಯಲ್ಲಿ ವಾಸ ಇದ್ದೇವೆ. ದಿ: ೧.೦೪.೨೦೧೫ ಪಿರ್ಯಾದಿ ಮತ್ತು ಆರೋಪಿ ಭೇಟಿ ಆಗಿಲ್ಲ ಎಂದರೆ ಸರಿಯಲ್ಲ. ಆ ದಿನಾಂಕದಂದು ನಾನು ಆಲಪ್ಪನಹಳ್ಳಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ದಿ: ೧೦.೦೪.೨೦೧೫ ರಂದು ಆರೋಪಿ ಪಿರ್ಯಾದಿಗೆ ಯಾವುದೇ ಚೆಕ್ಕು ನೀಡಿಲ್ಲ ಎಂದರೆ ಸರಿಯಲ್ಲ. ದಿ: ೧.೦೪.೨೦೧೫ ರಂದು ಆರೋಪಿ ಮತ್ತು ಪಿರ್ಯಾದಿ ನಡುವೆ ಮಾತುಕತೆ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಆರೋಪಿ ಹಣ ಕೊಟ್ಟು, ಹಣ ಮರಳಿಸಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಈ ಹಿಂದೆ ಪಿರ್ಯಾದಿಯಿಂದ ಹಣ ಪಡೆದುಕೊಂಡು, ಮರಳಿ ಕೊಡುತ್ತಿದ್ದರು ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯಿಂದ ಆರೋಪಿ ಈ ಹಿಂದೆ ಹಣ ಪಡೆದಿರುವ ಕುರಿತು ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**